**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ**

**ಸಿ.ಸಿ.2248/2025**

| | | | | |
|---|---|---|---|---|
| 01 | ಹೆಸರು | ರಾಜೇಶ್ | ಸಿ ಡಬ್ಲೂ | 1 |
| 02 | ತಂದೆಯ ಹೆಸರು | ಲೇ. ನಿಂಗೇಗೌಡ | ಪಿಡಬ್ಲೂ | 1 |
| 03 | ವಯಸ್ಸು | 40 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ವ್ಯವಸಾಯ | 28.07.2026 | |
| 05 | ಊರು | ಬೀಡನಹಳ್ಳಿ ಗ್ರಾಮ | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾ ಸಾ 2 ರಿಂದ 5 ರವರ ಪರಿಚಯ ಇರುತ್ತದೆ. ಆರೋಪಿ ನನ್ನ ಅಣ್ಣ ಇರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದೆ. ಸದರಿ ದಾಖಲೆಯು ಗಾಯಾಳುವಿನ ಹೇಳಿಕೆ ದೂರಾಗಿದ್ದು, ಅದನ್ನು ನಿ ಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ನನಗೆ ನಿ ಪಿ 1ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ. ನಾನು ಆರೋಪಿ ವಿರುದ್ಧ ಯಾವುದೇ ದೂರು ಕೊಟ್ಟಿರುವುದಿಲ್ಲ. ಆರೋಪಿಯ ನನಗೆ ಕುಡುಗೋಲಿನಿಂದ ಹಲ್ಲೆ ಮಾಡಿರುವುದಿಲ್ಲ ಮತ್ತು ನನಗೆ ಕೊಲೆಬೆದರಿಕೆ ಹಾಕಿರುವುದಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮರದ ಹಿಡಿ ಇರುವ ಕುಡುಗೋಲನ್ನು ಮತ್ತು ಹೂವಿನ ಡಿಸೈನ್ ಇರುವ ತುಂಬು ತೋಳಿನ ಶರ್ಟ್ ನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ನಾನು ಬನ್ನೂರಿನ ಸರ್ಕಾರಿ ಆಸ್ಪತ್ರೆ ಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿರುವ ಸಹಿ ನನ್ನದೆ. ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿ ಪಿ 2 ಎಂದು ಹಾಗೂ ಸಾಕ್ಷಿ

ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನನಗೆ ನಿ ಪಿ 2 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ನಿ ಪಿ 2 ರಂತೆ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಮತ್ತು ಯಾವುದೇ ಮು. ಮಾಲನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಮುಂದುವರಿದ ಹೇಳಿಕೆ ಕೊಟ್ಟಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ದಿಃ15.05.2024 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಬೀಡನಹಳ್ಳಿ ಗ್ರಾಮಂ ಬಸವೇಶ್ವರ ದೇವಸ್ಥಾನದ ಬಳಿ ಕುಳಿತ್ತಿದ್ದಾಗ ಆರೋಪಿಯು ಅಲ್ಲಿಗೆ ಬಂದು ಆಸ್ತಿ ವಿಚಾರವಾಗಿ ನನ್ನೊಂದಿಗೆ ಜಗಳ ತೆಗೆದು ಕುಡಿಗೋಲಿನ ಮರದ ಹಿಡಿಯಿಂದ ನನ್ನ ಮುಖಕ್ಕೆ ಗುದ್ದಿ ನನ್ನ ಮೂಗಿನ ತುದಿಗೆ, ತುಟಿಗೆ ಮತ್ತು ನನ್ನ ಬಾಯಿಯ ಮೇಲ್ಭಾಗದ ಹಲ್ಲುಗಳು ಮುರಿದು ತೀವ್ರಸ್ವರೂಪ ಗಾಯಗಳನ್ನು ಉಂಟುಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ನನ್ನ ಎಡಗಾಲಿಗೆ ಕೂಡುಗೋಲಿನಿಂದ ಹೊಡೆದು ತೀವ್ರಸ್ವರೂಪ ಗಾಯ ಉಂಟುಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ ನನಗೆ ಕೊಲೆ ಬೆದರಿಕ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ನಂತರ ನಾನು ಬನ್ನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದುಕೊಳ್ಳುತ್ತಿದ್ದಾಗ ವೈದ್ಯರ ಸಮಕ್ಷಮ ನಿಪಿ-1 ರಂತೆ ಪೊಲೀಸ್ ರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸ್ ರು ದಿಃ 28.05.2024 ರಂದು ಚಾಸಾ-3 ಮತ್ತು 5 ರವರ ಸಮಕ್ಷವು ಪಂಚನಾಮೆ ಜರುಗಿಸಿ ನ್ಯಾಯಾಲಯದ ಮುಂದೆ ಇರುವ ಶರ್ಟ್ ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ ದಿಃ28.05.2024 ರಂದು, " ದಿಃ15.05.2024 ರಂದು ನನ್ನ ಅಣ್ಣ---- ನನ್ನ ಮರುಹೇಳಿಕೆ ನೀಡಿರುತ್ತೇನೆ.", ಈಗ ಓದಿ ಹೇಳಿದಂತೆ ಪೊಲೀಸರಿಗೆ

ಮುಂದುವರಿದ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ ಪಿ 3 ಎಂದು ಗುರುತಿಸಲಾಯಿತು.

ನಾನು ಮತ್ತು ಆರೋಪಿ ಈಗ ರಾಜಿ ಮಾಡಿಕೊಂಡು ಅನೋನ್ಯವಾಗಿದ್ದೇವೆ ಎಂದರೆ ಸರಿ. ನಾನು ನಿ ಪಿ 1 ರಂತೆ ಆರೋಪಿ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿದ್ದರೂ ಸಹ ಮತ್ತು ಪೊಲೀಸರು ನನ್ನ ಸಮಕ್ಷಮ ನಿ ಪಿ 2 ರಂತೆ ಪಂಚನಾಮೆ ಜರುಗಿಸಿದ್ದರೂ ಸಹ ಮತ್ತು ನಾನು ನಿ ಪಿ 3 ರಂತೆ ಪೊಲೀಸರಿಗೆ ಮುಂದುವರಿದ ಹೇಳಿಕೆ ನೀಡಿದ್ದರೂ ಸಹ, ಆರೋಪಿ ನನ್ನ ಅಣ್ಣನಾದ ಕಾರಣ ಆರೋಪಿಗೆ ಶಿಕ್ಷೆ ಆಗಬಾರದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ನುಡಿದಿರುತ್ತಾರೆ.**

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

Sd/-

(ಸಚಿನ್ ಹೆಚ್ . ಆರ್.)

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,

ತಿ.ನರಸೀಪುರ.